Presented on : 07-02-2025
Registered on : 10-02-2025
Decided on : 06-07-2026
Duration : 1 years, 4 months, 27 days

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ಹಿನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ**

**ಉಪಸ್ಥಿತರುಃ**
**ಶ್ರೀ. ವಜ್ರೇಶ ಬಿ.ಎ.,ಎಲ್.ಎಲ್.ಬಿ.**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ**

**ಅಪರಾಧಿಕ ಪ್ರಕರಣಃ 146/2025**

**ದಿನಾಂಕ 06 ನೇ ಜುಲೈ 2026**

**ಪಿರ್ಯಾದುದಾರರುಃ** ರಾಜ್ಯ ಸರ್ಕಾರ –
ಸಂತೆಬೆನ್ನೂರು ಪೋಲಿಸ್ ಠಾಣೆ.

**(ಪ್ರತಿನಿಧಿಸುವವರು ಸ.ಸ.ಅಭಿಯೋಜಕರು)**

**:ವಿರುದ್ಧಃ**

**ಆರೋಪಿತರುಃ**

1. ಪೂಜಾ
ಕೋಂ ಜಗದೀಶ,
ವಯಸ್ಸುಃ 35 ವರ್ಷ,

2. ಜಗದೀಶ
ಬಿನ್ ಚಂದ್ರಪ್ಪ,
ವಯಸ್ಸುಃ 38 ವರ್ಷ,
ಇಬ್ಬರೂ ವಾಸ: ಕರೆಕಟ್ಟೆ ಗ್ರಾಮ,

ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

**(ಪ್ರತಿನಿಧಿಸುವವರು ಶ್ರೀ. ಲಕ್ಷ್ಮೀಕಾಂತ -ವಕೀಲರು)**

| | |
|---|---|
| ಅಪರಾಧ ನಡೆದ ದಿನಾಂಕ | 14.03.2024 |
| ಅಪರಾಧ ವರದಿ ಮಾಡಿದ ದಿನಾಂಕ | 03.04.2024 |
| ದೂರುದಾರರ ಹೆಸರು | ಗಂಗಮ್ಮ |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | 03.07.2026 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 03.07.2026 |
| ಅಪರಾಧ ಕಲಂಗಳು | ಭಾ.ದಂ.ಸಂ.ಕಲಂ. 341, 504, 323, 354 ಮತ್ತು 506 ಸಹವಾಚಕ ಕಲಂ 34 |
| ತೀರ್ಮಾನ ಹೊರಡಿಸುವ ದಿನಾಂಕ | 06.07.2026 |
| ತೀರ್ಪು | ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ. |

ಸಹಿ/-

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

## ತೀರ್ಪು

ಸಂತೆಬೆನ್ನೂರು ಪೋಲಿಸ್ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 504, 323, 354 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪಕ್ಷದ ಪ್ರಕರಣದ ಸಾರಾಂಶವೇನೆಂದರೆ:**

ದಿನಾಂಕ 14.03.2024 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ ಕರೆಕಟ್ಟೆ ಗ್ರಾಮದಲ್ಲಿ ಚಾಸಾ.4 ರವರು ಮನೆಗೆ ಬರುತ್ತಿರುವಾಗ ಆರೋಪಿತರು ಅಡ್ಡಗಟ್ಟಿ ಚಾಸಾ.4 ರವರಿಗೆ ಏನೋ ಬೋಸೂಡಿ ಮಗನೇ ಯಾರಪ್ಪನ ಆಸ್ತಿ ಎಂದು ಈ ಸ್ವತ್ತಿಗೆ ಅರ್ಜಿ ಹಾಕಿದ್ದೀಯೋ ಸೂಳೇ ಮಗನೇ ನೀನು ಹೇಗ ಈ ಸ್ವತ್ತು ಪಡೆಯುತ್ತೀಯೋ ನಾವು ನೋಡುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿದಾಗ ಚಾಸಾ.1 ಮತ್ತು 5 ರವರು ಬಿಡಿಸಿಕೊಳ್ಳಲು ಬಂದಾಗ ಅವರಿಗೂ ಸಹ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ಪ್ರಾಣ ಬೆದರಿಕೆ ಹಾಕಿ ಇನ್ನೊಮ್ಮೆ ವಿಚಾರಿಸಲು ಬಂದರೆ ಹೊಡೆದು ಸಾಯಿಸುತ್ತೇವೆಂದು ಬೆದರಿಕೆ ಹೊಡೆದಿರುತ್ತಾರೆ. ನಂತರ ಇದೇ ದಿನ ರಾತ್ರಿ 7.00 ಗಂಟೆ ಸುಮಾರಿಗೆ ಚಾಸಾ.1 ರವರ ಮನೆಯ ಬಳಿ ಮತ್ತೆ ಆರೋಪಿತರು ಜಗಳ ಮಾಡಿ ಬೈದಾಡಿ ಹಲ್ಲೆ ಮಾಡಿರುತ್ತಾರೆ. ದಿನಾಂಕ 14.03.2024 ರಂದು ಚಾಸಾ.1 ರವರು ಲಿಖಿತ ದೂರನ್ನು ದಾಖಲಿಸಿದ ಮೇರೆಗೆ, ಪೊಲೀಸರು ಪ್ರಥಮ ವರ್ತಮಾನ ವರದಿ ಸ್ವೀಕರಿಸಿ ಸಿ.ಆರ್.ಸಂಖ್ಯೆ: 70/2024 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 504, 323, 354 ಮತ್ತು 506 ಸಹವಾಚಕ ಕಲಂ 34 ರ ಆರೋಪಗಳಿಗೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ

ಸಲ್ಲಿಸಿರುತ್ತಾರೆ. ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿದ್ದು, ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಅಭಿಯೋಜನೆಯ ಪ್ರಕರಣದ ಯಥಾಪ್ರತಿಯನ್ನು ಕಲಂ 207 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ರೀತ್ಯಾ ಒದಗಿಸಲಾಯಿತು.

4. ನ್ಯಾಯಾಲಯವು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 504, 323, 354 ಮತ್ತು 506 ಸಹವಾಚಕ ಕಲಂ 34ರ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿರುತ್ತದೆ. ಆರೋಪಿತರು ತಮ್ಮ ಮೇಲೆ ಹೊರಿಸಲಾದ ಮೇಲ್ಕಂಡ ಅಪರಾಧಗಳನ್ನು ಕೇಳಿ ತಿಳಿದುಕೊಂಡು, ನಿರಾಕರಿಸಿ ವಿಚಾರಣೆ ಆಗಬೇಕೆಂದು ಮಂಡಿಸಿದರು.

5. ಆರೋಪಿತರ ಮೇಲಿನ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರು ಪ್ರಾಸಾ.1 ರಿಂದ 3 ರವರ ಮೌಖಿಕ ಸಾಕ್ಷ್ಯ ವಿಚಾರಣೆಯನ್ನು ಮತ್ತು ನಿಶಾನೆ ಪಿ.1 ರಿಂದ ಪಿ.6 ರವರೆಗೆ ದಾಖಲಾತಿ ಸಾಕ್ಷ್ಯವನ್ನು ನಿಶಾನಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರಿಂದ ಆರೋಪಿತರ ವಿರುದ್ಧ ಯಾವುದೇ ಅಪರಾಧ ಸನ್ನಿವೇಶಗಳು ಮೂಡಿ ಬರದ ಕಾರಣ ಕಲಂ 351 ರ ಭಾರತೀಯ ನಾಗರೀಕ ಸುರಕ್ಷ ಸಂಹಿತೆ (313 ದಂಡ ಪ್ರಕ್ರಿಯಾ ಸಂಹಿತೆ) ಅಡಿ ಆರೋಪಿತನ ಹೇಳಿಕೆಯನ್ನು ದಾಖಲಿಸಲು ವಿನಾಯಿತಿ ನೀಡಲಾಯಿತು.

6. ಕಡತದಲ್ಲಿನ ಲಭ್ಯ ದಾಖಲೆಗಳ ಆಧಾರದ ಮೇರೆಗೆ ನ್ಯಾಯಾಲಯಕ್ಕೆ ಪರಿಗಣಿಸಬೇಕಾದ ಅಂಶಗಳು ಈ ಕೆಳಕಂಡಂತೆ ಮೂಡಿ ಬಂದವು:

**ಅಂಶಗಳು**

1) ದಿನಾಂಕ 14.03.2024 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ ಕರೆಕಟ್ಟೆ ಗ್ರಾಮದಲ್ಲಿ ಚಾಸಾ.4 ರವರು ಮನೆಗೆ ಬರುತ್ತಿರುವಾಗ ಆರೋಪಿತರು ಚಾಸಾ.4 ರವರಿಗೆ ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿದಾಗ ಚಾಸಾ.1 ಮತ್ತು 5 ರವರು ಬಿಡಿಸಿಕೊಳ್ಳಲು ಬಂದಾಗ ಅವರಿಗೂ ಸಹ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

2) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.4 ರವರಿಗೆ ಏನೋ ಬೋಸೂಡಿ ಮಗನೇ ಯಾರಪ್ಪನ ಆಸ್ತಿ ಎಂದು ಈ ಸ್ವತ್ತಿಗೆ ಅರ್ಜಿ ಹಾಕಿದ್ದೀಯೋ ಸೂಳೇ ಮಗನೇ ನೀನು ಹೇಗ ಈ ಸ್ವತ್ತು ಪಡೆಯುತ್ತೀಯೋ ನಾವು ನೋಡುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

3) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 4 ರವರಿಗೆ ಇನ್ನೊಮ್ಮೆ ವಿಚಾರಿಸಲು ಬಂದರೆ ಹೊಡೆದು ಸಾಯಿಸುತ್ತೇವೆಂದು ಬೆದರಿಕೆ ಹಾಕಿರುತ್ತಾರೆ ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

4) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಹಿಡಿದು ಎಳೆದಾಡಿ ಮಾನಕ್ಕೆ ಕುಂದುಂಟು ಮಾಡಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

5) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಅಡ್ಡಗಟ್ಟಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

6) ಮಾಡುವ ಆದೇಶವೇನು?

7. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ ಸಂಖ್ಯೆ 1 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 2 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 3 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 4 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 5 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 6 – ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿಃ

**ಕಾರಣಗಳು**

8. **ಅಂಶ ಸಂಖ್ಯೆ 1 ರಿಂದ 5:** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಪುನರಾವರ್ತಿತ ವಿಸ್ತೃತ ಚರ್ಚೆಯನ್ನು ತಡೆಯುವ ಉದ್ದೇಶದಿಂದ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಈ ಪ್ರಕಣರದಲ್ಲಿ ಪಿರ್ಯಾದುದಾರರಾದ ಚಾಸಾ.1/ಗಂಗಮ್ಮರವರು ತಮ್ಮ ದೂರಿನಲ್ಲಿ ಆರೋಪಿಸುವುದೇನೆಂದರೆ, ದಿನಾಂಕ 14.03.2024 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ ಕರೆಕಟ್ಟೆ ಗ್ರಾಮದಲ್ಲಿ ಚಾಸಾ.4 ರವರು ಮನೆಗೆ ಬರುತ್ತಿರುವಾಗ ಆರೋಪಿತರು ಅಡ್ಡಗಟ್ಟಿ ಚಾಸಾ.4 ರವರಿಗೆ ಏನೋ ಬೋಸೂಡಿ ಮಗನೇ ಯಾರಪ್ಪನ ಆಸ್ತಿ ಎಂದು ಈ ಸ್ವತ್ತಿಗೆ ಅರ್ಜಿ

ಹಾಕಿದ್ದೀಯೋ ಸೂಳೇ ಮಗನೇ ನೀನು ಹೇಗ ಈ ಸ್ವತ್ತು ಪಡೆಯುತ್ತೀಯೋ ನಾವು ನೋಡುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿದಾಗ ಚಾಸಾ.1 ಮತ್ತು 5 ರವರು ಬಿಡಿಸಿಕೊಳ್ಳಲು ಬಂದಾಗ ಅವರಿಗೂ ಸಹ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ಪ್ರಾಣ ಬೆದರಿಕೆ ಹಾಕಿ ಇನ್ನೊಮ್ಮೆ ವಿಚಾರಿಸಲು ಬಂದರೆ ಹೊಡೆದು ಸಾಯಿಸುತ್ತೇವೆಂದು ಬೆದರಿಕೆ ಹೊಡೆದಿರುತ್ತಾರೆ. ನಂತರ ಇದೇ ದಿನ ರಾತ್ರಿ 7.00 ಗಂಟೆ ಸುಮಾರಿಗೆ ಚಾಸಾ.1 ರವರ ಮನೆಯ ಬಳಿ ಮತ್ತೆ ಆರೋಪಿತರು ಜಗಳ ಮಾಡಿ ಬೈದಾಡಿ ಹಲ್ಲೆ ಮಾಡಿರುವುದಾಗಿ ಆರೋಪಿಸಿ ದೂರನ್ನು ನೀಡಿದ ಮೇರೆಗೆ ಸಂತೆಬೆನ್ನೂರು ಪೊಲೀಸ್ ಠಾಣೆಯವರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ.

10. ಫ್ರಾಸಾ–01/ಗಂಗಮ್ಮ/ಪಿರ್ಯಾದುದಾರರು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಆರೋಪಿತರು ಮತ್ತು ನಮ್ಮ ನಡುವೆ ಮನೆ ಜಾಗದ ವಿಚಾರವಾಗಿ ಮಾತುಕತೆಯಾಗಿತ್ತು ಅಷ್ಟೆ. ಈ ಸಂದರ್ಭದಲ್ಲಿ ಆರೋಪಿತರನ್ನು ಕರೆಯಿಸಿ ಠಾಣೆಗೆ ಬುದ್ಧಿ ಹೇಳುವಂತೆ ಕೇಳಿಕೊಂಡಾಗ, ಠಾಣೆಯಲ್ಲಿ ನನ್ನಿಂದ ಕೆಲವು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ, ಯಾವ ದಾಖಲೆಗಳಿಗೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ನುಡಿಯುತ್ತಾರೆ.

11. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಚಾಸಾ.1 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ.

12. ಪ್ರಾಸಾ.2/ಶಿವರಾಜೆ ಕೆ.ಜಿ./ಗಾಯಾಳು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಆರೋಪಿತರು ಮತ್ತು ನಮ್ಮ ನಡುವೆ ಮನೆ ಜಾಗದ ವಿಚಾರವಾಗಿ ಮಾತುಕತೆಯಾಗಿತ್ತು ಅಷ್ಟೆ. ಈ ಸಂದರ್ಭದಲ್ಲಿ ಆರೋಪಿತರನ್ನು ಕರೆಯಿಸಿ ಠಾಣೆಗೆ ಬುದ್ದಿ ಹೇಳುವಂತೆ ಕೇಳಿಕೊಂಡಾಗ, ಠಾಣೆಯಲ್ಲಿ ನನ್ನಿಂದ ಕೆಲವು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ, ಯಾವ ದಾಖಲೆಗಳಿಗೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ನುಡಿಯುತ್ತಾರೆ.

13. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಚಾಸಾ.4 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಗಿದೆ.

14. ಪ್ರಾಸಾ.3/ಸ್ವತಃ/ಗಾಯಾಳು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ.

15. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಚಾಸಾ.5 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ–6 ಎಂದು ಗುರುತಿಸಲಾಗಿದೆ.

16. ಸದರಿ ಪ್ರಾಸಾ–1 ರಿಂದ 3 ರವರನ್ನು ಅಭಿಯೋಜನಾ ಪಕ್ಷವು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗಲೂ ಸಹ ಆರೋಪಿತರ ವಿರುದ್ಧ ನಂಬಲಾರ್ಹ ಸಾಕ್ಷ್ಯವನ್ನು ಸಾಬೀತುಪಡಿಸಲು ವಿಫಲವಾಗಿದೆ. ಈ ಅಂಶವನ್ನು ಮನಗಂಡು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರು ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದು ಇನ್ನುಳಿದ ಸಾಕ್ಷಿದಾರರ ವಿಚಾರಣೆಯಿಂದ ಯಾವುದೇ ಉದ್ದೇಶ ಈಡೇರದ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಕೋರಿದ ಕೋರಿಕೆಯನ್ನು ಮೇಲ್ಕಂಡ ಕಾರಣಗಳಿಗಾಗಿ ನ್ಯಾಯಾಲಯ ನಿರಾಕರಿಸಿರುತ್ತದೆ.

17. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣವನ್ನು ಪ್ರಾಸಾ.1 ರವರು/ಪಿರ್ಯಾದುದಾರರು ಮತ್ತು ಪ್ರಾಸಾ.2 ಮತ್ತು 3 ರವರು/ಗಾಯಾಳು ಸಾಕ್ಷಿ ಮತ್ತು ಕೃತ್ಯ ಸ್ಥಳದ ಪಂಚನಾಮೆ ಸಾಕ್ಷಿ ಆಗಿದ್ದರೂ ಕೂಡ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ನಿಸ್ಸಂದೇಹವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಮೇಲ್ಕಂಡ **ಅಂಶ ಸಂಖ್ಯೆ 1 ರಿಂದ 5** ಅನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

18. **ಅಂಶ ಸಂಖ್ಯೆ 6**: ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ.248(1) ರಂತೆ ಪ್ರದತ್ತವಾದ ಅಧಿಕಾರದಂತೆ ಆರೋಪಿತರ ವಿರುದ್ಧ ಹೂಡಲಾದ ಶಿಕ್ಷಾರ್ಹ ಅಪರಾಧಗಳಾದ ಭಾರತೀಯ ದಂಡ ಸಂಹಿತೆ ಕಲಂ 341, 504, 323, 354 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ದಾಖಲಾದ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಆರೋಪಿತರ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಮೇಲ್ಮನವಿ ಅವಧಿಯವರೆವಿಗೂ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 06 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

ಸಹಿ/-

**(ವಜ್ರೇಶ)**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

**ಅನುಬಂಧ**

**1. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿಃ**

ಫ್ರಾಸಾ-1/ಚಾಸಾ-1 - ಗಂಗಮ್ಮ

ಫ್ರಾಸಾ-2/ಚಾಸಾ-4 - ಶಿವರಾಜ

ಫ್ರಾಸಾ-2/ಚಾಸಾ-5 - ಸತ್ಯಮ್ಮ

**2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರಃ**

| | | |
|---|---|---|
| ನಿಪಿ-1 | - | ದೂರು |
| ನಿಪಿ-2 | - | ಫ್ರಾಸಾ.1 ರವರ ಹೇಳಿಕೆ |
| ನಿಪಿ-3 | - | ಸ್ಥಳ ಮಹಜರ್ |
| ನಿಪಿ-4 | - | ಭಾವಚಿತ್ರ |
| ನಿಪಿ-5 | - | ಫ್ರಾಸಾ.2 ರವರ ಹೇಳಿಕೆ |
| ನಿಪಿ-6 | - | ಫ್ರಾಸಾ.3 ರವರ ಹೇಳಿಕೆ |

**3. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರಃ**

- ಇಲ್ಲ -

4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರಃ

- ಇಲ್ಲ -

5. ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿಃ

- ಇಲ್ಲ -

ಸಹಿ/-

(ವಜ್ರೇಶ)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.